**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ ಕುಮಟಾ**

**ಸಿ ಸಿ ನಂಃ 1401/2021**

ಫಿರ್ಯಾದಿಃ ಸರಕಾರ ವಿರುದ್ಧ ಆರೋಪಿ: ಗಣಪತಿ ನಾರಾಯಣ ಗೌಡ

**ದೋಷಾರೋಪಣೆ**

ಶ್ರೀ ನರೇಂದ್ರ ಬಿ. ಆರ್, ಬಿ.ಎಸ್.ಸಿ., ಎಲ್.ಎಲ್.ಬಿ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ

ನಾನು ನಿಮ್ಮ ಅಂದರೆ –

ಗಣಪತಿ ನಾರಾಯಣ ಗೌಡ,
ವಯಸ್ಸು 30 ವರ್ಷ,
ವಾಸಃ ಸಂತೆಗುಳಿ, ಕುಮಟಾ

ನಿಮ್ಮ ಮೇಲೆ ಹೊರಿಸುವ ಅಪಾದನೆ ಏನೆಂದರೆಃ–

ಕುಮಟಾ ಪೋಲಿಸ್ ಠಾಣೆಯ ವ್ಯಾಪ್ತಿಯಲ್ಲಿ ಬರುವ ಕುಮಟಾ ತಾಲೂಕು ಸಂತೆಗುಳಿ ಊರಿನ ಬ್ರಿಡ್ಜ ಹತ್ತಿರ ಆರೋಪಿಯಾದ ನೀವು, ನೀವು ಜೈಲಿಗೆ ಹೋಗಲು ಪಿರ್ಯಾದಿಯವರೇ ಕಾರಣ ಅಂತಾ ಅವರ ಮೇಲೆ ದ್ವೇಷದಿಂದ ಇದ್ದು, ದಿನಾಂಕ 29.1.2021 ರಂದು ಮಧ್ಯಾಹ್ನ 1.45 ಗಂಟೆಯ ಸುಮಾರಿಗೆ ಪಿರ್ಯಾದಿಯವರು ತಮ್ಮ ಕಾರನಲ್ಲಿ ಸಂತೆಗುಳಿ ಕಡೆಯಿಂದ ಮನೆಯ ಕಡೆಗೆ ಹೊರಟಿದ್ದಾಗ ಆರೋಪಿಯಾದ ನೀವು ನಿಮ್ಮ ಬಾಬ್ತು ಪಲ್ಸರ ಬೈಕ ನಂ. ಕೆಎ 47/ಯು 5190 ನೇದರಲ್ಲಿ ಬಂದು ಪಿರ್ಯಾದಿಯವರ ಕಾರನ್ನು ನಿಮ್ಮ ಬೈಕಿನಿಂದ ಅಡ್ಡಗಟ್ಟಿ ತಡೆಗಟ್ಟಿದ್ದು, ಆ ಮೂಲಕ ಭಾ.ದಂ.ಸಂ.ಕಲಂ **341** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಮತ್ತು ಈ ನ್ಯಾಯಾಲಯದ ಸಂಜ್ಞೇಯಕ್ಕೆ ಒಳಪಟ್ಟಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು ಪಿರ್ಯಾದಿಯವರನ್ನು ಉದ್ದೇಶಿಸಿ "ಬೋಳಿಮಗನೇ" ಅಂತಾ ಅವಾಚ್ಯ ಶಬ್ದದಿಂದ ಬೈದಿದ್ದು, ಆ ಮೂಲಕ ಭಾ.ದಂ.ಸಂ.ಕಲಂ **504** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಮತ್ತು ಈ ನ್ಯಾಯಾಲಯದ ಸಂಜ್ಞೇಯಕ್ಕೆ ಒಳಪಟ್ಟಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು ಫಿರ್ಯಾದಿಯವರಿಗೆ "ನಿನ್ನನ್ನು ಮಾತ್ರ ನಾನು ಮುಗಿಸದೇ ಬಿಡುವುದಿಲ್ಲ" ಅಂತಾ ಜೀವದ ಬೆದರಿಕೆ ಹಾಕಿದ್ದು, ಆ ಮೂಲಕ ಭಾ.ದಂ.ಸಂ.ಕಲಂ **506** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಮತ್ತು ಈ ನ್ಯಾಯಾಲಯದ ಸಂಜ್ಞೇಯಕ್ಕೆ ಒಳಪಟ್ಟಿರುತ್ತೀರಿ.

ನೀವು ಮೇಲಿನ ಆರೋಪಗಳಡಿಯಲ್ಲಿ ವಿಚಾರಣೆಗೆ ಗುರಿಯಾಗ ತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ಪ್ರ.ನಂ.1 – ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆ ಕೇಳಿದಿರಾ? ಅದು ನಿಮಗೆ ತಿಳಿಯಿತೇ?

ಉತ್ತರಃ

ಪ್ರ.ನಂ.2 – ನೀವು ಸದ್ರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೆ?

**ಉತ್ತರಃ**

(ಮೇಲಿನ ದೋಷಾರೋಪಣೆಯನ್ನು ಆರೋಪಿಗೆ ತಿಳಿದಿರುವ ಭಾಷೆಯಲ್ಲಿ ಓದಿ ತಿಳಿಸಿ ಹೇಳಿ ಆರೋಪಿ ಉತ್ತರಿಸಿದ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬರೆದುಕೊಂಡದ್ದಾಗಿದೆಯೆಂದು ನಾನು ಈ ಮೂಲಕ ದೃಢೀಕರಿಸುತ್ತೇನೆ)

Sd/-

**ದಿಃ 25.7.2022**

**(ನರೇಂದ್ರ ಬಿ.ಆರ್)**

ಪ್ರಧಾನ **ಪ್ರ.ದ.ನ್ಯಾದಂಡಾಧಿಕಾರಿ, ಕುಮಟಾ.**